/

ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/28/2016-17. ದಿನಾಂಕ:16-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹೆಚ್.ರವಿ ತಂದೆ ಹೆಚ್.ಮಲ್ಲಿಕಾರ್ಜುನ<br>2)ತಿಪ್ಪಮ್ಮ ಗಂಡ ಹಡಪದ ವೀರಣ್ಣ<br>ಸೂಲದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಕೆ.ಕಲ್ಲೇಶ ತಂದೆ ಬಸಪ್ಪ.<br>2)ಕೆ.ಹನುಮಂತಪ್ಪ ತಂದೆ ಬಸಪ್ಪ.<br>3)ತಿಪ್ಪೇಸ್ವಾಮಿ ತಂದೆ ಬಸಪ್ಪ.<br>ಸೂಲದಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 508ಬಿ. ವಿಸ್ತೀರ್ಣ 1-85. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 508ಬಿ. ವಿಸ್ತೀರ್ಣ 1-85. ಎಕ್ರೆ ಜಮೀನನ್ನು ಸದರಿ ಗ್ರಾಮದ ಹೆಚ್.ರವಿ ತಂದೆ ಹೆಚ್.ಮಲ್ಲಿಕಾರ್ಜುನ ಇವರು ದಿನಾಂಕ 20-12-2013 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸೂಲದಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 28-12-2013. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಕೆ.ಕಲ್ಲೇಶ ತಂದೆ ಬಸಪ್ಪ. ಕೆ.ಹನುಮಂತಪ್ಪ ತಂದೆ ಬಸಪ್ಪ. ತಿಪ್ಪೇಸ್ವಾಮಿ ತಂದೆ ಬಸಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 19/2013-14. ದಿನಾಂಕ 29-01-2014. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 29-08-2016 ರಿಂದ 16-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಸೂಲದಹಳ್ಳಿ ಗ್ರಾಮದ ಸನಂ 508ಬಿ. ವಿಸ್ತೀರ್ಣ 1-85. ಎಕ್ರೆ ಜಮೀನು ಅರ್ಜಿದಾರರ ಅಜ್ಜಿಯವರಾದ ತಿಪ್ಪಮ್ಮ ಗಂಡ ಹಡಪದ ವೀರಣ್ಣ. ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 10-04-1985 ರಂದು ಹಾಗೂ ಇವರ ಅಜ್ಜನಾದ ಹಡಪದ ವೀರಣ್ಣ ತಂದೆ ಕಾಡಪ್ಪ ಇವರು ದಿನಾಂಕ 17-02-2012 ರಂದು ಹಾಗೂ ಅರ್ಜಿದಾರರ ತಾಯಿಯವರಾದ ಶಾಂತವೀರಮ್ಮ ಗಂಡ ಮಲ್ಲಿಕಾರ್ಜುನ ಇವರು ದಿನಾಂಕ 20-10-2012 ರಂದು ನಿಧನ ಹೊಂದಿದ್ದು ಸದರಿ ತಿಪ್ಪಮ್ಮ ಇವರಿಗೆ ಗಂಡು ಸಂತಾನ ಇಲ್ಲದ ಕಾರಣ ಅರ್ಜಿದಾರರ ತಂದೆಯವರಾದ ಹೆಚ್. ಮಲ್ಲಿಕಾರ್ಜುನ ತಂದೆ ಹೆಚ್.ನಾಗಪ್ಪ ಇವರು ದಿನಾಂಕ 20-12-2013 ರಂದು ಅರ್ಜಿದಾರರ ಹೆಸರಲ್ಲಿ ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಕಾರಣ ಅರ್ಜಿದಾರರ ಹೆಸರಲ್ಲಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ-2

ಹಾಗೂ ತಕರಾರುದಾರರು ನೊಂದಾಯಿತವಲ್ಲದ ಕ್ರಯ ಪತ್ರವನ್ನಾಧರಿಸಿ ವಿವಾದಿತ ಜಮೀನಿಗೆ ತಾವು ಹಕ್ಕುದಾರರೆಂದು ತಕರಾರು ಅರ್ಜಿ ಸಲ್ಲಿಸಿರುವುದು ಕಾನೂನು ರಿತ್ಯಾ ಮಾನ್ಯವಿಲ್ಲದ್ದಾಗಿರುತ್ತದೆ.ಅದನ್ನು ತಳ್ಳಿಹಾಕಿ ಅರ್ಜಿದಾರರ ಕೋರಿಕೆಯನ್ವಯ ವರ್ಗಾವಣೆಗೆ ಆದೇಶಿಸುವಂತೆ ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರು ಸದರಿ ವಿವಾದಿತ ಜಮೀನನ್ನು ದಿನಾಂಕ 15-07-1987 ರಂದು ಹಡಪದ ತಿಪ್ಪಮ್ಮನ ಮಗಳು ಶಾಂತವೀರಮ್ಮ ಗೌರಮ್ಮ ಮತ್ತು ಋಷಬೇಂದ್ರಪ್ಪ ಇವರಿಂದ ಖರೀದಿಸಿರುವ ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ತಕರಾರು ಎಂದು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ತಕರಾರುದಾರರು ನೊಂದಾಯಿತ ವಲ್ಲದ ಕ್ರಯ ಪತ್ರವನ್ನಾಧರಿಸಿ ವಿವಾದಿತ ಜಮೀನಿಗೆ ಹಕ್ಕುದಾರರೆಂದು ತಕರಾರು ಅರ್ಜಿ ಸಲ್ಲಿಸಿರುವುದು ಕಾನೂನು ರಿತ್ಯಾ ಮಾನ್ಯವಲ್ಲವಾದ್ದರಿಂದ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಅರ್ಜಿದಾರರ ಕೋರಿಕೆಯನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸೂಲದಹಳ್ಳಿ ಗ್ರಾಮದ ಸನಂ 508ಬಿ. ವಿಸ್ತೀರ್ಣ 1-85. ಎಕ್ರೆ ಜಮೀನನ್ನು ದಿನಾಂಕ 20-12-2013 ರ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರಾದ ಹೆಚ್.ರವಿ ತಂದೆ ಹೆಚ್.ಮಲ್ಲಿಕಾರ್ಜುನ ಸೂಲದಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ. ಮತ್ತು ಬಾಧಿತರಾವರು ಸಿವಿಲ್ ನ್ಯಾಯಾಲಯದ ಮೊರೆ ಹೋಗಲು ಸಹಾ ಸೂಚಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 16-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿರುತ್ತದೆ.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹೆಚ್.ರವಿ ತಂದೆ ಹೆಚ್.ಮಲ್ಲಿಕಾರ್ಜುನ ಸೂಲದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಜಗದೀಶಗೌಡ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕೆ.ಕಲ್ಲೇಶ ತಂದೆ ಬಸಪ್ಪ. ಕೆ.ಹನುಮಂತಪ್ಪ ತಂದೆ ಬಸಪ್ಪ. ತಿಪ್ಪೇಸ್ವಾಮಿ ತಂದೆ ಬಸಪ್ಪ. ಸೂಲದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.